ಉತ್ತರಕನ್ನಡ ಜಿಲ್ಲೆಯ ಸಿದ್ಧಾಪುರದವರಾದ ಭುವನೇಶ್ವರಿ ಹೆಗಡೆ ಹಾಸ್ಯ ಬರಹಗಾರ್ತಿ. ಕೇಳುಗರ ಚಿತ್ತ ಸೆಳೆಯುವಂತೆ ನವಿರು ಶೈಲಿಯಲ್ಲಿ ಮಾತನಾಡಬಲ್ಲ ವಾಗ್ಮಿ. 'ಮುಗುಳು', 'ನಕ್ಕು ಹಗುರಾಗಿ', 'ಎಂಥದ್ದು ಮಾರಾಯ್ರೆ', 'ವಲಲ ಪ್ರತಾಪ', 'ಹಾಸಭಾಸ', 'ಮೃಗಯಾ ವಿನೋದ', 'ಬೆಟ್ಟದ ಭಾಗೀರಥಿ', 'ಮಾತಾಡಲು ಮಾತೇಬೇಕೆ', 'ಪುಟ್ಟಿಯ ಪಟ್ಟೆ ಹುಲಿ', 'ಕೈಗುಣ ಬಾಯ್ಗುಣ' ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಮಂಗಳೂರು ನಿವಾಸಿ.

ತೆಗೆದುಕೊಂಡು ಟೀವಿಯವರು ಶುದ್ಧ-ಅಶುದ್ಧ, ಶಿಷ್ಟ-ಅಶಿಷ್ಟ, ಶೀಲ-ಅಶ್ಲೀಲಗಳ ವ್ಯತ್ಯಾಸವನ್ನು ತೆಗೆದೊಗೆದು ತಮಗೆ ತೋಚಿದ ಹೆಸರಿನಲ್ಲಿ ಕಾರ್ಯಕ್ರಮಗಳನ್ನು ನೀಡತೊಡಗಿದರು. ಅಟ್ಟಹಾಸಗೈಯ್ಯತೊಡಗಿದರು. ಕೆಲವು ಮುಗ್ಧ ಕಲಾವಿದರು ಹೆಸರಿನ, ಹಣದ, ಕೀರ್ತಿಯ ಆಮಿಷಕ್ಕೆ ಬಲಿಯಾಗಿ ಈ ಕಬಂಧ ಬಾಹುಗಳ ಒಳಗೆ ತಾವೇ ಹೋಗಿ ಸಿಲುಕಿಕೊಂಡರು. (ಅಶ್ಲೀಲ ಹಾಸ್ಯ ಕಾಮಿಡಿ ಷೋಗಳ ತೀರ್ಪುಗಾರರಾಗಿ ಕುಳಿತ ಖ್ಯಾತನಾಮರನ್ನು ನೋಡಿದಾಗೆಲ್ಲ ಹೀಗೆ ಅನ್ನಿಸುತ್ತದೆ )

ಅಂತಹ ಷೋಗಳಲ್ಲಿ ಹೋಗಿ ಕುಳಿತು ಚಪ್ಪಾಳೆ ತಟ್ಟಿ ಕೂಗಿ ಕಿರುಚಿ ಬರುವ ಪ್ರೇಕ್ಷಕ ವರ್ಗವೂ ತಯಾರಾಯಿತು. ಸರಿ. ಆ ಪ್ರೇಕ್ಷಕ ವರ್ಗದ ಅಭಿರುಚಿಯನ್ನು ತಮ್ಮ ಕೊಳಕು ಅಭಿರುಚಿಗೆ ಹೊಂದಿಸಿಕೊಳ್ಳುವ ಕಲಾವಿದರು ಸಾಕಷ್ಟು ಸಂಖ್ಯೆಯಲ್ಲಿ



ಹುಟ್ಟಿಕೊಂಡರು. ವೇದಿಕೆಗೆ ಬರುವಾಗಲೇ ಅಸಭ್ಯ ಭಂಗಿಯಲ್ಲಿ ಅಶ್ಲೀಲ ಮಾತುಗಳನ್ನು ಆಡುತ್ತ ಹಾಡುತ್ತ ಬಂದು ತಮ್ಮ ದುರಭ್ಯಾಸಗಳ ವರ್ಣನೆ ಮಾಡುವುದು, ಕುಡಿಯುವುದು ಬಡಿಯುವುದು ಇತ್ಯಾದಿ ಮಾಡುತ್ತಾ ಹೆಚ್ಚುಗಾರಿಕೆ ಎಂಬಂತೆ ತೀರ್ಪುಗಾರರನ್ನೂ ತಮ್ಮೊಂದಿಗೆ ಬರಲು ಕರೆಯುವುದು, ಹೀಗೇ ಎಂಬ ನಿಯಮಗಳೇ ಇಲ್ಲ! ಮಾತಿಗಂತೂ ಲಗಾಮೇ ಇಲ್ಲ. ಮಾಡಿದ್ದೇ ಅಭಿನಯ, ಆಡಿದ್ದೇ ಮಾತು. ಅಶ್ಲೀಲತೆಯ ಪರಾಕಾಷ್ಠೆಯಲ್ಲಿ ಬೀಳುವ ಚಪ್ಪಾಳೆಗಳು. ಇವೆಲ್ಲವೂ ನಡೆಯುವುದು ಹಾಸ್ಯದ ಕಾಮಿಡಿ ಷೋಗಳ ಹೆಸರಿನಲ್ಲಿ. ಈ ಕಾಮಿಡಿ ಷೋಗಳನ್ನು ಸೆನ್ಸಾರ್ ಮಂಡಳಿಗೆ ತೋರಿಸಬೇಕೆಂಬ ನಿಯಮಗಳನ್ನಾದರೂ ತರಬಾರದೆ ಎಂದು ವ್ಯರ್ಥಾಲಾಪ ಮಾಡಿದ್ದೇ ಬಂತು.

ನಿಜವಾದ ಹಾಸ್ಯವನ್ನು ಕಂಡು ಬಲ್ಲವರು ಇಷ್ಟಪಡುವವರು ಇಂಥ ಕಾರ್ಯಕ್ರಮಗಳನ್ನು ನೋಡುವುದೇ ಇಲ್ಲ. (ನೋಡಿ ಪ್ರಾರಂಭದಲ್ಲೇ ಖಂಡಿಸತೊಡಗಿದ್ದರೆ ಇವು ಇಷ್ಟು ಹೆಚ್ಚಿಕೊಳ್ಳುತ್ತಿರಲಿಲ್ಲವೇನೋ). ಸ್ವಲ್ಪ ಸುಸಂಸ್ಕೃತ ಸಂತುಲಿತ ಮನಸ್ಸಿನ ಪ್ರೇಕ್ಷಕರು ಹೊಸ ತಲೆಮಾರಿನ ಯುವಕಯುವತಿಯರು ಹಾಸ್ಯವೆಂದರೆ ಇದೇ ಇರಬೇಕು ಎಂಬ ಅಭಿಪ್ರಾಯವನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಇದು ನಮ್ಮ ಟೀವಿ ಸಂಸ್ಕೃತಿ ತಂದಿಟ್ಟಿರುವ ಸಾಂಸ್ಕೃತಿಕ ದುರಂತ. ಸರಿಪಡಿಸಿಕೊಳ್ಳಲೇಬೇಕಾದ ಬೆಳವಣಿಗೆ. ಗುಣಪಡಿಸಲೇಬೇಕಾದ ಕಾಯಿಲೆ. ಅಸಭ್ಯತೆ ಅಶ್ಲೀಲತೆಗಳಂಥ ವೈರಾಣಗಳು ತಂದು ಬಿತ್ತಿರುವ ಕಾಯಿಲೆ.

ಒತ್ತಡದ ದಿನಚರಿಯ ಇಂದಿನ ದಿನಗಳಲ್ಲಿ ಮನಸ್ಸನ್ನು ಹಗುರವಾಗಿಸಲು ಹಾಸ್ಯ ಪ್ರಸಂಗಗಳ ವೀಕ್ಷಣೆ ತಪ್ಪೇನಲ್ಲ. ಬದಲು ಅದೊಂದು ಅಗತ್ಯವೇ ಹೌದು. ಉತ್ತಮ ಹಾಸ್ಯದ ಉದ್ದೇಶವೇ ಮನರಂಜನೆ